# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1015
ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಎಂ.ಎಲ್ ಅನಿಲ್ ಕುಮಾರ್
ಉತ್ತರಿಸಬೇಕಾದ ದಿನಾಂಕ : 23.02.2024
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಯಾವ ವರ್ಷದಲ್ಲಿ ಪ್ರಾರಂಭವಾಯಿತು; ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಧ್ಯೇಯೊದ್ದೇಶವೇನು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಗ್ರಾಮೀಣ ಪ್ರದೇಶದ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಎಲ್ಲಾ ವರ್ಗಗಳ ವಸತಿ ಶಾಲೆಗಳನ್ನು ಒಂದೇ ಸಂಸ್ಥೆಯ ಕಾರ್ಯವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ಆದೇಶ ಸಂಖ್ಯೆ ಸಕಇ 532 ಪಕವಿ 1996. ದಿನಾಂಕ:06.10.1999 ರಲ್ಲಿ 'ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ'ವನ್ನು ಪ್ರಾರಂಭಿಸಲು ಆದೇಶಿಸಿದೆ. ಅದರಂತೆ ಈ ಸಂಘವನ್ನು ಕರ್ನಾಟಕ ಸಂಘಗಳ ನೊಂದಣಿ ಕಾಯಿದೆ 1960 ರ ಅಡಿಯಲ್ಲಿ ದಿನಾಂಕ:22.11.1999 ರಂದು ನೊಂದಣಿಯಾಗಿ ದಿನಾಂಕ:02.02.2000 ರಂದು ಕಾರ್ಯಾರಂಭ ಮಾಡಲಾಗಿರುತ್ತದೆ.<br><br>**ಸಂಘದ ಧ್ಯೇಯೋದ್ದೇಶಗಳು:-**<br>• ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಪ್ರಧಾನವಾಗಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಉತ್ತಮ ಗುಣಮಟ್ಟದ ಆಧುನಿಕ ಶಿಕ್ಷಣವನ್ನು ನೀಡುವುದು.<br>• ಸಂಘದ ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ವಿದ್ಯಾಭ್ಯಾಸ ನೀಡಲು ಶಿಕ್ಷಕರುಗಳಿಗೆ ಅಧ್ಯಯನ ಕೋರ್ಸುಗಳನ್ನು, ಸಮ್ಮೇಳನಗಳನ್ನು, ಉಪನ್ಯಾಸಗಳನ್ನು, ಕಾರ್ಯಗಾರಗಳನ್ನು ಮತ್ತು ಇತರೆ ಚಟುವಟಿಕೆಗಳನ್ನು ನಡೆಸುವುದು.<br>• ವಸತಿ ಶಾಲೆಗಳ ಉತ್ತಮ ಕಾರ್ಯನಿರ್ವಹಣೆಗೆ ಅಗತ್ಯವಿರುವ ಶೈಕ್ಷಣಿಕ ಮತ್ತು ಇತರೆ ಹುದ್ದೆಗಳನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ ಸೃಜಿಸುವುದು.<br>• ಸಂಘದ ಮತ್ತು ವಸತಿ ಶಾಲೆಗಳ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಿರುವ ಸಮಿತಿಗಳನ್ನು ರಚಿಸುವುದು.<br>• ಸಂಘದ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ ಅಗತ್ಯವಿರುವ ಅನುದಾನವನ್ನು ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಮತ್ತು ಇತರೆ ಮೂಲಗಳಿಂದ ಸ್ವೀಕರಿಸುವುದು.<br><br>ವಸತಿ ಶಾಲೆಗಳಿಗೆ ಅಗತ್ಯವಿರುವ ಶಾಲಾ ಸಂಕೀರ್ಣಗಳನ್ನು ನಿರ್ಮಿಸುವುದು ಮತ್ತು ಅವುಗಳ ನಿರ್ವಹಣೆ. |

| | | |
|---|---|---|
| ಆ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳು ಯಾವುವು; ಸದರಿ ವಸತಿ ಶಾಲೆಗಳಲ್ಲಿ ಯಾವ ಪಠ್ಯಕ್ರಮವನ್ನು ಅಳವಡಿಸಲಾಗುವುದು; ಕೇಂದ್ರೀಯ ಪಠ್ಯಕ್ರಮವನ್ನು ಸದರಿ ವಸತಿ ಶಾಲೆಗಳಲ್ಲಿ ಅಳವಡಿಸಲು ಸರ್ಕಾರ ಚಿಂತಿಸಿದೆಯೇ; (ವಿಸ್ತೃತವಾದ ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ವಿವಿಧ ಮಾದರಿಯಲ್ಲಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುವ ವಿವರ ಕೆಳಕಂಡಂತಿವೆ.<br>1. ಮೊರಾರ್ಜಿ ದೇಸಾಯಿ ವಸತಿ ಶಾಲೆ<br>2. ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ<br>3. ಡಾ॥ ಬಿ.ಆರ್ ಅಂಬೇಡ್ಕರ್ ವಸತಿ ಶಾಲೆ<br>4. ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ<br>5. ಮಾಸ್ತಿ ವೆಂಕಟೇಶ ಅಯ್ಯಂಗರ್ ವಸತಿ ಶಾಲೆ<br>6. ಅಲೆಮಾರಿ ವಸತಿ ಶಾಲೆ<br>7. ಸಂಗೊಳ್ಳಿ ರಾಯಣ್ಣ ವಸತಿ ಶಾಲೆ<br>8. ಕವಿರನ್ನ ವಸತಿ ಶಾಲೆ<br>9. ಗಾಂಧಿತತ್ವ ವಸತಿ ಶಾಲೆ<br>10. ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ವಸತಿ ಶಾಲೆ<br>11. ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ (ದೇವನಹಳ್ಳಿ ವಸತಿ ಶಾಲೆಗೆ 50 ಸೀಟುಗಳು ಮಾತ್ರ ಮಂಜೂರಾಗಿದೆ.)<br>12. ಏಕಲವ್ಯ ಮಾದರಿ ವಸತಿ ಶಾಲೆ<br>13. ಶ್ರೀ ನಾರಾಯಣ ಗುರು ವಸತಿ ಶಾಲೆ<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿ ಶಾಲೆಗಳಲ್ಲಿ ರಾಜ್ಯ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿದೆ. ಪ್ರತಿ ಜಿಲ್ಲೆಗೆ ಒಂದು ಶಾಲೆಯಲ್ಲಿ ಸಿಬಿಎಸ್‌ಇ ( CBSE ) ಪಠ್ಯಕ್ರಮವನ್ನು ಅಳವಡಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಪದವಿ ಪೂರ್ವ ವಸತಿ ಕಾಲೇಜುಗಳು ಇವೆಯೇ; ಹಾಗಿದ್ದಲ್ಲಿ, ರಾಜ್ಯದಲ್ಲಿರುವ ಪದವಿ ಪೂರ್ವ ವಸತಿ ಕಾಲೇಜುಗಳ ಮಾಹಿತಿ ನೀಡುವುದು; ಇಲ್ಲದಿದ್ದಲ್ಲಿ, ಪ್ರತಿ ಪದವಿ ಪೂರ್ವ ವಸತಿ ಕಾಲೇಜುಗಳನ್ನು ಪ್ರತಿ ತಾಲ್ಲೂಕಿನಲ್ಲಿ ತೆರೆಯುವ ಬಗ್ಗೆ ಸರ್ಕಾರದ ನಿಲುವೇನು; (ಸಂಪೂರ್ಣವಾದ ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಪ್ರಸ್ತುತ 84 ವಸತಿ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 26 ಸ್ವತಂತ್ರ ಪದವಿ ಪೂರ್ವ ವಸತಿ ಕಾಲೇಜುಗಳು, 58 ವಸತಿ ಶಾಲೆಗಳು ಪದವಿ ಪೂರ್ವ ತರಗತಿಗೆ ಉನ್ನತೀಕರಿಸಲಾಗಿರುವ ವಸತಿ ಕಾಲೇಜುಗಳಾಗಿವೆ.<br>ರಾಜ್ಯದಲ್ಲಿ ಹೊಸ ತಾಲೂಕುಗಳು ಸೇರಿದಂತೆ 240 ತಾಲ್ಲೂಕುಗಳಿದ್ದು, 12 ತಾಲ್ಲೂಕುಗಳಲ್ಲಿ ವಸತಿ ಶಾಲೆಗಳು ಇರುವುದಿಲ್ಲ ಉಳಿದ 228 ತಾಲ್ಲೂಕುಗಳಲ್ಲಿ 833 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 12 ತಾಲ್ಲೂಕುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ವಸತಿ ಶಾಲೆಗಳಿರುವುದಿಲ್ಲ. ಉಳಿದ 216 ತಾಲ್ಲೂಕುಗಳ ಪೈಕಿ 56 ತಾಲ್ಲೂಕುಗಳಲ್ಲಿ ಪದವಿ ಪೂರ್ವ ತರಗತಿಗೆ ಉನ್ನತೀಕರಿಸಲಾಗಿರುವ 58 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br>ಮೇಲೆ ತಿಳಿಸಿದಂತೆ, 58 ಉನ್ನತೀಕರಣ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುವ 56 ತಾಲ್ಲೂಕುಗಳನ್ನು ಹೊರತು ಪಡಿಸಿ, ಉಳಿದ 164 ತಾಲ್ಲೂಕುಗಳಲ್ಲಿ 2023-24 ನೇ ಸಾಲಿಗೆ 06 ರಿಂದ 10 ತರಗತಿಯವರೆಗೆ |

| | | | |
|---|---|---|---|
| | | | ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳನ್ನು ಪಿಯುಸಿಗೆ ಮೇಲ್ದರ್ಜೆಗೇರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಆರ್ಥಿಕ ಇಲಾಖೆಯು ಸದ್ಯಕ್ಕೆ ಪ್ರಸ್ತಾವನೆಯನ್ನು ಮುಂದೂಡುವಂತೆ ತಿಳಿಸಿರುತ್ತದೆ. |
| ಈ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮೂಲಭೂತ ಸೌಕರ್ಯ ಪೂರೈಸಲು ಸರ್ಕಾರದಿಂದ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ವಸತಿ, ಆಹಾರ ವ್ಯವಸ್ಥೆ ಹಾಗೂ ಗುಣಮಟ್ಟದ ಶಿಕ್ಷಣದೊಂದಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಅಗತ್ಯ ಮೂಲಭೂತ ಸೌಕರ್ಯಗಳಾದ ಸಿದ್ಧಪಡಿಸಿದ ಸಮವಸ್ತ್ರ, ನೋಟ್ ಪುಸ್ತಕ, ಲೇಖನ ಸಾಮಗ್ರಿ, ಶೂ, ಸಾಕ್ಸ್, ಟೈ, ಬೆಲ್ಟ್ , ಶುಚಿಸಂಭ್ರಮ ಕಿಟ್, ಪಠ್ಯ ಪುಸ್ತಕ, ಹಾಗೂ ಇತರೆ ಸಾಮಗ್ರಿಗಳನ್ನು ಒದಗಿಸಲಾಗುತ್ತಿರುತ್ತದೆ.<br>ಸ್ವಂತ ಕಟ್ಟಡ ಹೊಂದಿರುವ ಭಾಗಶಃ ವಸತಿ ಶಾಲಾ/ಕಾಲೇಜುಗಳಿಗೆ ಪೀಠೋಪಕರಣ ಸಾಮಗ್ರಿಗಳಾದ ಡೆಸ್ಕ್ ಕಂ ಬೆಂಚ್, ಟು ಟಯರ್ ಕಾಟ್, ಡೈನಿಂಗ್ ಟೇಬಲ್, ಆಫೀಸ್ ಟೇಬಲ್, ಎಸ್ ಟೈಪ್ ಚೇರ್, ಅಲ್ಮೆರಾ ರ್‍ಯಾಕ್ಸ್, ಹಾಸಿಗೆ, ದಿಂಬು, ಬೆಡ್‌ಶೀಟ್, ಬೆಡ್‌ಸ್ಪ್ರೆಡ್ ಗಳನ್ನು ಒದಗಿಸಲಾಗಿರುತ್ತದೆ. ಉಳಿದ ವಸತಿ ಶಾಲೆ/ಕಾಲೇಜುಗಳಿಗೆ ಅನುದಾನ ಲಭ್ಯತೆಯ ಆಧಾರದ ಮೇರೆಗೆ ಹಂತ ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುವುದು.<br>2024-25ನೇ ಸಾಲಿನ ಆಯವ್ಯಯದಲ್ಲಿ ವಸತಿ ಶಾಲೆ/ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳಾದ ಡೆಸ್ಕ್ ಕಮ್ ಬೆಂಚ್, ಟು ಟೈರ್ ಕಾಟ್, ಹಾಸಿಗೆಗಳು, ದಿಂಬುಗಳು, ಬೆಡ್‌ಸ್ಪ್ರೆಡ್ ಮತ್ತು ಬೆಡ್‌ಶೀಟ್, ಡೈನಿಂಗ್ ಟೇಬಲ್, ತಟ್ಟೆ-ಲೋಟಗಳು, ಪಾತ್ರೆ ಪರಿಕರಗಳು (ಸೆಟ್‌ಗಳಲ್ಲಿ) , ವಾಟರ್ ಪ್ಯೂರಿಫೈಯರ್, ಆಫೀಸ್ ಟೇಬಲ್, ಎಸ್-ಟೈಪ್ ಛೇರ್, ಸೋಲಾರ್ ವಾಟರ್ ಹೀಟರ್ (500 ಲೀ. ಕೆಪಾಸಿಟಿ), ಕಂಪ್ಯೂಟರ್, ಕಂಪ್ಯೂಟರ್ ಟೇಬಲ್, ಕಂಪ್ಯೂಟರ್ ಛೇರ್, ಪಾಠೋಪಕರಣಗಳು ಮತ್ತು ಶಾಲಾ ಬ್ಯಾಗ್ ಗಳನ್ನು ರೂ.485.87 ಕೋಟಿಗಳ ವೆಚ್ಚದಲ್ಲಿ ಹಾಗೂ ಬಾಕಿ ಉಳಿದ ಅವಶ್ಯ ಮೂಲಭೂತ ಸೌಕರ್ಯಗಳಾದ ಕ್ರೀಡಾ ಸಾಮಗ್ರಿಗಳು, ಸಂಗೀತ ಉಪಕರಣಗಳು, ಟ್ರಂಕ್, ಫ್ರೀಜರ್, ನರ್ಸಿಂಗ್ ಕಿಟ್(ಸೆಟ್‌ಗಳಲ್ಲಿ), ಸಿ.ಸಿ.ಟಿ.ವಿ.(1 ಸೆಟ್), ಅಲ್ಮೇರಾ ರ್‍ಯಾಕ್ಸ್, ಟಿ.ವಿ., ಬಕೆಟ್ ಮತ್ತು ಜಗ್ಗು, ಡಸ್ಟ್ ಬಿನ್, ಗ್ರೀನ್ ಮತ್ತು ವೈಟ್ ಬೋರ್ಡ್, ಫ್ಲೋರ್ ಕ್ಲೀನಿಂಗ್ ಮಿಷನ್ ಹಾಗೂ ಸ್ಯಾನಿಟೈಸ್‌ಗೆ ಸಂಬಂಧಿಸಿದ ಉಪಕರಣ ಮತ್ತು ಜಮಖಾನ (ದೊಡ್ಡದು) ಗಳನ್ನು ರೂ.127.99 ಕೋಟಿಗಳ ವೆಚ್ಚದಲ್ಲಿ, ಒಟ್ಟಾರೆ ಮೂಲಭೂತ ಸಾಮಗ್ರಿಗಳನ್ನು ಒಟ್ಟಾರೆ ರೂ.613.86 ಕೋಟಿಗಳ ವೆಚ್ಚದಲ್ಲಿ ಒದಗಿಸಲು 2024-25 ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿರುತ್ತದೆ. ಆಯವ್ಯಯದಲ್ಲಿ ರೂ.613.86 ಕೋಟಿಗಳ |

| | | |
|---|---|---|
| | | ನಿಗಧಿಪಡಿಸಿದಲ್ಲಿ ಅನುದಾನದ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುವುದು. |
| **ಉ)** | ಕಳೆದ 3 ವರ್ಷಗಳಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು; ಈ ಅನುದಾನವನು ಯಾವ ರೀತಿಯಾಗಿ ಬಳಕೆ ಮಾಡಲಾಗಿದೆ? (ಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಸದರಿ ಅನುದಾನವನ್ನು 833 ವಸತಿ ಶಾಲಾ/ಕಾಲೇಜುಗಳ ನಿರ್ವಹಣೆ ಹಾಗೂ ಮುಂದುವರೆದ ಶಾಲಾ/ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ. |

ಸಕಇ 69 ಎಂಡಿಎಸ್ 2024

(ಡಾ||ಹೆಚ್.ಸಿ. ಮಹದೇವಪ್ಪ )
ಸಮಾಜ ಕಲ್ಯಾಣ ಸಚಿವರು

# ಅನುಬಂಧ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಕಾರ್ಯಕ್ರಮದ ಹೆಸರು | ಆಯವ್ಯಯದಲ್ಲಿ ಒದಗಿಸಿದ ಅನುದಾನ | ಬಿಡುಗಡೆ ಮಾಡಿದ ಮೊತ್ತ | ಖರ್ಚು ಮಾಡಿದ ಮೊತ್ತ |
|---|---|---|---|---|---|
| 1 | 2020-21 | ಪ.ಜಾತಿಯ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 52000.00 | 32000.00 | 32000.00 |
| | | ಪ.ಜಾತಿಯ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 34500.00 | 26000.00 | 26000.00 |
| | | ಪ.ವರ್ಗದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 14200.00 | 9200.00 | 9200.00 |
| | | ಪ. ವರ್ಗದ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 14000.00 | 12500.00 | 12500.00 |
| | | ಹಿಂ.ವರ್ಗದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 18600.00 | 8600.00 | 8600.00 |
| | | ಹಿಂ. ವರ್ಗದ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 5781.00 | 4336.00 | 4336.00 |
| 2 | 2021-22 | ಪ.ಜಾತಿಯ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 52000.00 | 52000.00 | 52000.00 |
| | | ಪ.ಜಾತಿಯ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 41893.73 | 41893.73 | 41893.73 |
| | | ಪ.ವರ್ಗದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 14200.00 | 14200.00 | 14200.00 |
| | | ಪ. ವರ್ಗದ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 21709.62 | 21709.62 | 21709.62 |
| | | ಹಿಂ.ವರ್ಗದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 17299.99 | 17299.99 | 17299.99 |
| | | ಹಿಂ. ವರ್ಗದ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 3000.00 | 3000.00 | 3000.00 |
| 3 | 2022-23 | ಪ.ಜಾತಿಯ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 54953.67 | 54953.67 | 54953.67 |
| | | ಪ.ಜಾತಿಯ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 83000.00 | 83000.00 | 83000.00 |
| | | ಪ.ವರ್ಗದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 16798.98 | 16798.98 | 16798.98 |
| | | ಪ. ವರ್ಗದ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 26300.00 | 26300.00 | 26300.00 |
| | | ಹಿಂ.ವರ್ಗದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 20788.00 | 20788.00 | 20788.00 |
| | | ಹಿಂ. ವರ್ಗದ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 7528.00 | 7528.00 | 4514.00 |
| 4 | 2023-24 | ಪ.ಜಾತಿಯ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 79129.48 | 79129.48 | 79129.48 |
| | | ಪ.ಜಾತಿಯ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 66000.00 | 56000.00 | 56000.00 |
| | | ಪ.ವರ್ಗದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 25062.67 | 18230.67 | 18230.67 |
| | | ಪ. ವರ್ಗದ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 22000.00 | 11000.00 | 11000.00 |
| | | ಹಿಂ.ವರ್ಗದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ | 20603.51 | 170048.48 | 170048.48 |
| | | ಹಿಂ. ವರ್ಗದ ವಸತಿ ಶಾಲೆ/ಕಾಲೇಜುಗಳ ಕಟ್ಟಡ ನಿರ್ಮಾಣ | 11500.00 | 0.00 | 0.00 |